

## ಗೆಲುವಿನ ಮುಂದುವರಿಕೆ?

ಶ್ರಾವಣದ ಜೊತೆಗೆ ಅದ್ದೂರಿ ಬಜೆಟ್‌ನ ಚಿತ್ರಗಳು ತೆರೆ ಕಾಣುವ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಈ ಸಾಲಿನಲ್ಲಿ ಮೊದಲು ಚಿತ್ರಮಂದಿರಕ್ಕೆ ಬರುತ್ತಿರುವ (ಆ. 12ರಂದು) ಚಿತ್ರ ಸುದೀಪ್ ನಟನೆಯ ‘ಕೋಟಿಗೊಬ್ಬ 2’.

‘ಕೋಟಿಗೊಬ್ಬ’ ಚಿತ್ರದ ಶೀರ್ಷಿಕೆಗೂ ಕನ್ನಡ ಚಿತ್ರರಸಿಕರಿಗೂ ಭಾವನಾತ್ಮಕ ನಂಟಿದೆ. ವಿಷ್ಣುವರ್ಧನ್ ಅಭಿನಯದ ಈ ಚಿತ್ರ ದೊಡ್ಡ ಯಶಸ್ಸು ಗಳಿಸಿತ್ತು. ಆ ಚಿತ್ರವನ್ನು ನಿರ್ಮಿಸಿದ್ದ ಸೂರಪ್ಪಬಾಬು ಅವರು ಇದೀಗ ಸುದೀಪ್ ನಾಯಕತ್ವದಲ್ಲಿ ‘ಕೋಟಿಗೊಬ್ಬ 2’ ನಿರ್ಮಿಸಿದ್ದಾರೆ. ಈ ಮೊದಲು ‘ವಿಷ್ಣುವರ್ಧನ’ ಶೀರ್ಷಿಕೆಯಲ್ಲಿ ನಟಿಸಿದ್ದ ಸುದೀಪ್, ವಿಷ್ಣು ಅಭಿಮಾನದ ಮುಂದುವರಿಕೆಯಂತೆ ‘ಕೋಟಿಗೊಬ್ಬ 2’ರಲ್ಲಿ ನಟಿಸಿದ್ದಾರೆ.

ಸುದೀಪ್‌ರ ಈ ಸಿನಿಮಾ ಕನ್ನಡದ ಜೊತೆಗೆ ತಮಿಳಿನಲ್ಲೂ ನಿರ್ಮಾಣಗೊಂಡಿದೆ. ದಕ್ಷಿಣ ಭಾರತದ ಜನಪ್ರಿಯ ನಿರ್ದೇಶಕರಲ್ಲಿ ಒಬ್ಬರಾದ ಕೆ.ಎಸ್. ರವಿಕುಮಾರ್ ಚಿತ್ರದ ನಿರ್ದೇಶಕರು. ನಿತ್ಯಾ ಮೆನನ್ ನಾಯಕಿಯಾಗಿರುವ ಈ ಸಿನಿಮಾ ತೆಲುಗಿಗೂ ಡಬ್ ಆಗಲಿದೆ. ‘ಈಗ’, ‘ಪುಲಿ’, ‘ಬಾಹುಬಲಿ’ ಚಿತ್ರಗಳ ಮೂಲಕ ತೆಲುಗು–ತಮಿಳು ಚಿತ್ರರಂಗದಲ್ಲಿ ಸುದೀಪ್ ಜನಪ್ರಿಯರು. ಆದರೆ, ನಾಯಕರಾಗಿ ದಕ್ಷಿಣದ ಇತರ ಭಾಷೆಗಳಲ್ಲೂ ಜನಪ್ರಿಯತೆ ಗಳಿಸುವ ನಿಟ್ಟಿನಲ್ಲಿ ಪ್ರಸಕ್ತ ಸಿನಿಮಾ ಮುಖ್ಯವಾಗಿದೆ.

ಚಿತ್ರದ ಟ್ರೈಲರ್ ಈಗಾಗಲೇ ಬಿಡುಗಡೆಯಾಗಿದ್ದು, ಸಿನಿಮಾದ ಅದ್ದೂರಿತನಕ್ಕೆ ಉದಾಹರಣೆಯಂತಿದೆ. ವಿಜಯಪ್ರಕಾಶ್ ಹಾಡಿರುವ, ನಾಗೇಂದ್ರ ಪ್ರಸಾದ್ ರಚನೆಯ ‘ಕೋಟಿಗೊಬ್ಬ’ ಗೀತೆ ಸುದೀಪ್ ಅಭಿಮಾನಿಗಳಿಗೆ ಇಷ್ಟವಾಗಿದೆ. ಸದ್ಯದ ಟ್ರೆಂಡ್ ನೋಡಿದರೆ ‘ಕೋಟಿಗೊಬ್ಬ 2’ ಸುದೀಪ್‌ರ ಗೆಲುವಿನ ಯಾತ್ರೆಯ ಮುಂದುವರಿಕೆಯಾಗುವ ಎಲ್ಲ ಸಾಧ್ಯತೆಗಳೂ ಇವೆ.

## ‘ಅಸ್ತಿತ್ವ’ದ ಹುಡುಕಾಟದಲ್ಲಿ...

ನೂತನ್ ಉಮೇಶ್ ನಿರ್ದೇಶನದ ‘ಅಸ್ತಿತ್ವ’ ತೆರೆ ಕಾಣುವ ಸಿದ್ಧತೆಯಲ್ಲಿದೆ. ಈ ಸಿನಿಮಾದ ಶೀರ್ಷಿಕೆ ಚಿತ್ರದ ನಾಯಕಿ ಪ್ರಜ್ಞ ಪೂವಯ್ಯ ಅವರ ಪಾಲಿಗೆ ಒಂದು ರೀತಿ ಅನ್ವರ್ಥವಾಗಿ ಪರಿಣಮಿಸಿದೆ. ಕನ್ನಡ ಚಿತ್ರರಂಗದಲ್ಲಿ ನಾಯಕಿಯಾಗಿ ಅಸ್ತಿತ್ವ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಪ್ರಜ್ಞ ಅವರಿಗೆ ಈ ಸಿನಿಮಾದ ಗೆಲುವು ಮಹತ್ವದ್ದೆನ್ನಿಸಿದೆ.

ಕೊಡಗಿನ ಹುಡುಗಿ ಪ್ರಜ್ಞ ಕನ್ನಡ ಚಿತ್ರರಸಿಕರಿಗೆ ಹೊಸಬರಲ್ಲ. ಈಗಾಗಲೇ ಕೆಲವು ಕನ್ನಡ ಸಿನಿಮಾಗಳಲ್ಲಿ ನಟಿಸಿರುವ ಅವರು, ತಮಿಳು–ತೆಲುಗು–ತುಳು ಚಿತ್ರರಂಗಗಳತ್ತಲೂ ಪಿಕ್ನಿಕ್ ಹೋಗಿ ಮತ್ತೆ ಗಾಂಧಿನಗರಕ್ಕೆ ಮರಳಿದ್ದಾರೆ.

‘ಅಸ್ತಿತ್ವ’ ಸಿನಿಮಾದ ಪಾತ್ರದ ಬಗ್ಗೆ ಪ್ರಜ್ಞ ಅವರಿಗೆ ವಿಶೇಷ ಮೋಹ. ಈವರೆಗೆ ಅವರು ಗ್ಲಾಮರಸ್ ಹುಡುಗಿಯಾಗಿ ಕಾಣಿಸಿಕೊಂಡಿರುವುದೇ ಹೆಚ್ಚು. ಆದರೆ, ಈ ಚಿತ್ರದಲ್ಲಿ ಸರಳ ಹುಡುಗಿಯ ಪಾತ್ರದಲ್ಲಿ ನಟಿಸಿದ್ದಾರಂತೆ. ಕೋಮಲ ಸ್ವಭಾವದ ಈ ನಾಯಕಿ, ತನಗೆ ಸರಿ ಅನ್ನಿಸಿದ್ದನ್ನು ಹೇಳಲು ಹಿಂದು ಮುಂದೆ ನೋಡದ ದಿಟ್ಟೆಯೂ ಹೌದು. ಹಲವು ಆಯಾಮಗಳ ಈ ಪಾತ್ರದ ನಿರ್ವಹಣೆ ಪ್ರಜ್ಞ ಅವರಿಗೆ ಖುಷಿಕೊಟ್ಟಿದೆ. ‘ಈ ಸಿನಿಮಾ ನನ್ನ ವೃತ್ತಿಜೀವನದಲ್ಲಿ ಒಂದು ಸಿಹಿಯಾದ ಅನುಭವ’ ಎನ್ನುವುದು ಅವರ ಅನಿಸಿಕೆ.

